ನೋಟಕ್ಕೆ ಸಿಗುತ್ತಿದ್ದ ಅವರ ಮುದಿ ಪತ್ನಿಯನ್ನು, ಇನ್ನೊಮ್ಮೆ ಪರಸ್ಪರರನ್ನು ನೋಡುತ್ತಿದ್ದವರು ಈಗ ಅನಿವಾರ್ಯ ಎಂಬಂತೆ ನನ್ನನ್ನೂ ನೋಡಿದರು. ಯಾವ ಭಾವವೂ ಇಲ್ಲ.

ನಾನೂ ಸ್ವಲ್ಪ ಹೊತ್ತು ನೋಡೋಣ ಎಂದು ಅಲ್ಲಿಯೇ ನಿಂತು ಹೊಗೆ ಬಿಟ್ಟೆ.

"ಬಟಾಟೆ ಕೊಡಿ ನಣ್ಣರೇ, ನನಗೆ ತಡವಾಗುತ್ತದೆ! ಅರ್ಧ ಗಂಟೆಯಿಂದ ನಿಂತಿದ್ದೇನೆ" ಎಂದು ಆ ಇಬ್ಬರು ಹಳ್ಳಿಗರಲ್ಲಿ ಒಬ್ಬ ಅಸಹನೆಯಿಂದ ಅವರನ್ನು ಒತ್ತಾಯಿಸಿದ. ಓ ಹೀಗೋ! ಹಳ್ಳಿಗರ ರಸಭಾವರಹಿತ ಪ್ರತಿಕ್ರಿಯೆಗೆ ಕಾರಣ ತಿಳಿಯಿತು. ಇನ್ನೊಬ್ಬ ಹಳ್ಳಿಗ ಅಸಹನೆಯನ್ನು ತೋರದೆ ತನ್ನೊಳಗಿನ ಸಿಟ್ಟನ್ನು ಇನ್ನಷ್ಟು ಕುದಿಸುತ್ತಿರುವವನಂತೆ ಕಂಡ. ಮುಂದೆ ಒಮ್ಮೆಲೆ ಸಿಡಿದಾನು. ಈ ಇಬ್ಬರು ಗಿರಾಕಿಗಳ ಅಸ್ತಿತ್ವವನ್ನೇ ಲೆಕ್ಕಿಸದವರಂತೆ ನಣ್ಣರು ಆನಂದದಿಂದ ಕುಳಿತು ನಡುನಡುವೆ 'ಆಆಆಅ... ಆಆಅ!" ಎಂದು ರಾಗಾಲಾಪ ಮಾಡುತ್ತ ಸುಮ್ಮನೆ ಕುಳಿತಿದ್ದರು.

ನಾನಂದೆ, "ಇವರಿಗೆ ಬಟಾಟೆ ಕೊಡಿ ನಣ್ಣರೇ!"

ನಣ್ಣರು ತಟಕ್ಕನೆ ಎದ್ದು ತಕ್ಕಡಿಯ ಒಂದು ತಟ್ಟೆಯಲ್ಲಿ ಅರ್ಧ ಕಿಲೋ ತೂಕದ ಕಲ್ಲನ್ನು ಇಟ್ಟು ಇನ್ನೊಂದು ತಟ್ಟೆಗೆ ಏಳೆಂಟು ಬಟಾಟೆ ಹಾಕಿ ತೂಗಿ, ಬಟಾಟೆಯ ತಟ್ಟೆಯೇ ಕೆಳಗಿಳಿದುದನ್ನು ಕಂಡು ತೃಪ್ತನಾದ ಗಿರಾಕಿಯನ್ನು ಓರೆಗಣ್ಣಿನಿಂದ ಕಂಡು ನಗುತ್ತಾ ಹಳೆಯ ಪೇಪರೊಂದರಲ್ಲಿ ಅದನ್ನು ಕಟ್ಟಿ ಅವನ ಕೈಗಿತ್ತರು.

"ಎಷ್ಟು?"

"ಮೂರು ರೂಪಾಯಿ ಮೂವತ್ತು ಪೈಸೆ!"

"ಈಗ ಮೂವತ್ತು ಪೈಸೆ ಚಾಲ್ತಿಯಲ್ಲಿ ಉಂಟಾ? ಹೇಗೆ ಕೊಡುವುದು?"

"ನಾಳೆ ಕೊಡು."

ಹಳ್ಳಿಯವನು ಮತ್ತೆ ಮಾತನಾಡದೆ ಕಿಸೆಯಲ್ಲಿ ತಡಕಾಡಿ ಹತ್ತು ರೂಪಾಯಿಯ ನೋಟೊಂದನ್ನು ನಣ್ಣರಿಗೆ ನೀಡಿದ. ತೂಕದ ಕಲ್ಲುಗಳನ್ನು ಹಾಗೂ ಹಳೆಯ ಪೇಪರು ತುಂಡುಗಳನ್ನು ಇರಿಸಿ ಅಂದಗೆಟ್ಟಿದ್ದ ಹಳೆಯ ಒಂದೂವರೆ ಅಡಿ ಅಗಲದ ಮರದ ಕೌಂಟರಿನ ಡ್ರಾಯರನ್ನು ಎಳೆದು ನಣ್ಣರು ನೋಟನ್ನು ಅದಕ್ಕೆ ಹಾಕಿ ಐದು ರೂಪಾಯಿಯ ಒಂದು ನಾಣ್ಯವನ್ನೂ, ಎರಡು ರೂಪಾಯಿಯ ಇನ್ನೊಂದು ನಾಣ್ಯವನ್ನೂ ಹುಡುಕಿ ಗಿರಾಕಿಯ ಕೈಗಿತ್ತರು. ಆ ಒಟ್ಟು ಸನ್ನಿವೇಶವನ್ನು ನೋಡಿದರೆ ನಣ್ಣರು ಮತ್ತು ಅಲ್ಲಿದ್ದ ನಾವೆಲ್ಲ ಆ ಅಂಗಡಿಗೆ ಯಾವ ಸಂಬಂಧವೂ ಇಲ್ಲದವರು, ಅಲ್ಲಿಗೆ ಒಂದು ನಾಟಕದ ಪಾತ್ರಧಾರಿಗಳಂತೆ ಬಂದು ನಮ್ಮ ನಮ್ಮ ಪಾತ್ರಗಳನ್ನು ಅಭಿನಯಿಸುತ್ತಿದ್ದೇವೆ ಎಂದು ನನಗೆ ಅನಿಸುತ್ತಿತ್ತು, ಆ ಕ್ಷಣ.

ನಾನು ಕೇಳಿದೆ, "ಒಂದು ಕಿಲೋ ಬಟಾಟೆಗೆ ಎಷ್ಟು ನಣ್ಣರೆ?"

"ಇಪ್ಪತ್ತು ರೂಪಾಯಿ."

"ಮತ್ತೆ ಅರ್ಧ ಕಿಲೋಕ್ಕೆ?"

"ಇವತ್ತು ಮೂರು ರೂಪಾಯಿ ಮೂವತ್ತು ಪೈಸೆ. ನಾಳೆ ಗೊತ್ತಿಲ್ಲ" ನಣ್ಣರು ನಗುತ್ತಲೇ ಉತ್ತರಿಸಿದರು. ಮುಖದಲ್ಲಿ ಒಂದು ಚೂರು ಉಡಾಫೆಯಿಲ್ಲ. ನಾನು ಅಲ್ಲಿ ನಿಂತರೆ ಒಗಟು ಇನ್ನಷ್ಟು ಜಟಿಲವಾಗಬಹುದೆಂದು ಹೊಗೆ ಉಗುಳುತ್ತ ಬಟಾಟೆ ಹಿಡಿದುಕೊಂಡು ಹೋದ ಗಿರಾಕಿಯನ್ನು ಹಿಂಬಾಲಿಸಿದೆ.

"ಓಯ್" ಎಂದು ಅವನನ್ನು ಕರೆದು ನಿಲ್ಲಿಸಿ, "ಈ ನಣ್ಣರು ಯಾಕೆ ಹೀಗೆ?" ಎಂದು ಕೇಳಿದೆ.

"ಅವರು ಮೊದಲು ಸರಿ ಇದ್ದರು" ಎಂದು ಹಳ್ಳಿಗ ಪ್ರಾರಂಭಿಸಿದ. "ಮೊದಲು ನೋಡಿ ಓ